# GATWU Garment and Textile Workers Union
## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

**Affiliated to New Trade Union Initiative - (NTUI)**

---

**Avery Denison India Pvt.Ltd. ನ white color / Blue color / contract ಮತ್ತು additional ಕಾರ್ಮಿಕ ಸಂಗಾತಿಗಳೇ,**

ಈ ಕೆಳಗಿನ ಕೆಲವು ಮಹತ್ವದ ಗಮನಾರ್ಹ ವಿಷಯಗಳನ್ನು GATWU ತಮ್ಮ ಗಮನಕ್ಕೆ ತರುತ್ತಿದೆ.
ನೀವೇ ಯೋಚಿಸಿ, ನಿರ್ಧರಿಸಿ,

*ಇವರು ಯಾರು ಗೊತ್ತೇ?*

- ಒಂದೇ ಕಾರ್ಖಾನೆಯಲ್ಲಿ ಅಣ್ಣ ತಮ್ಮಂದಿರಂತೆ ಇರಬೇಕಾಗಿದ್ದ ನಮ್ಮನ್ನು ಇಂದಿಗೂ ಯಾವುದೇ ಆಧಾರವಿಲ್ಲದೆ ಕಾನೂನು ಬಾಹಿರವಾಗಿ ವೈಟ್‌ಕಾಲರ್, ಬ್ಲೂಕಾಲರ್, ಕಾಂಟ್ರಾಕ್ಟ್ ವರ್ಕರ್ಸ್, ಅಡಿಷನಲ್ ವರ್ಕರ್ಸ್ ಎಂದು ಒಡೆದು ಆಳುತ್ತಿರುವವರು ಯಾರು?
- ನಮ್ಮ ಶ್ರಮದಿಂದ ಬಸಿಯುವ ಬೆವರಿಗೆ ಮತ್ತು ಅದರಿಂದ ಗಳಿಸುವ ಕೋಟಿ ಕೋಟಿ ರೂಪಾಯಿಗೆ ಯಾವ ಬಣ್ಣದ ಕಾಲರ್ರೂ ಇಲ್ಲ.
- ವರ್ಷಾನುಗಟ್ಟಲೇ ಕೆಲಸ ಮಾಡುತ್ತಿದ್ದರೂ, ಕಾನೂನು ಬಾಹಿರವಾಗಿ contract workers ಅಡಿಯಲ್ಲೇ ಇಟ್ಟು, ಅತ್ಯಂತ ಕಡಿಮೆ ವೇತನ ನೀಡುತ್ತ, ಬೇರೆ ಯಾವುದೇ ಸೌಲಭ್ಯ ನೀಡದೆ ದುಡಿಸಿಕೊಳ್ಳುತ್ತಿರುವವರು ಯಾರು?
- Contract workers ಗಳನ್ನು ಕಂಪನಿಯ ಮುಖ್ಯ ಕಾರ್ಯಚಟುವಟಿಕೆಗಳಲ್ಲಿ ಕಾನೂನು ಬಾಹಿರವಾಗಿ ತೊಡಗಿಸಿಕೊಂಡಿದ್ದವರು ಯಾರು?
- ಹಬ್ಬದ ಕೊಡುಗೆ, ಸಮವಸ್ತ್ರ, ಶೂ ವಿತರಣೆ, ಕೊನೆಗೆ ಮೃತಪಟ್ಟವರಿಗೆ ಅಂತಿಮ ಸಂಸ್ಕಾರಕ್ಕೆ ಕೊಡುವ ಹಣದಲ್ಲಿಯು ಸಹ ಕಂಪನಿಯ ಕಾರ್ಮಿಕರು ಮತ್ತು Contract workers ನಡುವೆ ತಾರತಮ್ಯ ಮಾಡುತ್ತಾ ಮಲತಾಯಿ ಧೋರಣೆ ತೋರುತ್ತಿರುವವರು ಯಾರು?
- Contract workers ಮತ್ತು ಬ್ಲೂ ಕಾಲರ್ ವರ್ಕರ್ಸ್ ಮಧ್ಯೆ ಅಪಾರ ತಾರತಮ್ಯವೆಸಗುತ್ತಾ ಗುತ್ತಿಗೆ ಕಾರ್ಮಿಕರಿಗೆ ನ್ಯಾಯವಾಗಿ ಸಿಗಬೇಕಾದ ರಜೆಯ ಸೌಲಭ್ಯವನ್ನು ವಂಚಿಸುತ್ತಿರುವವರು ಯಾರು?
- ತನ್ನದು ದೊಡ್ಡ ಮಲ್ಟಿ ನ್ಯಾಷನಲ್ ಕಂಪನಿ ಎಂದು ಹೇಳಿಕೊಳ್ಳುತ್ತಾ ಈ ನೆಲದ Minimum wage act, Contract labour act, Live with wage act, ಈ ಎಲ್ಲಾ ಸಂವಿಧಾನಾತ್ಮಕ ಕಾನೂನುಗಳನ್ನು ಉಲ್ಲಂಘಿಸುತ್ತಿರುವವರು ಯಾರು?
- ಬ್ಲೂ ಕಾಲರ್ ವರ್ಕರ್ಸ್‌ಗಳಿಗೆ 30,000 ಸಾವಿರಕ್ಕಿಂತ ಹೆಚ್ಚು ವೇತನವನ್ನು ಕೊಟ್ಟರೂ, ಮೂಲವೇತವನ್ನು ಮಾತ್ರ ಕೇವಲ 8000 ದಿಂದ 10,000 ರೂ ನಿಗದಿ ಗೊಳಿಸಿ, ಅವರ ಪಿ.ಎಫ್, ಗ್ರಾಚುಟಿ ಹಾಗೂ ಬೋನಸ್ ಹಣವನ್ನು ಲೂಟಿ ಮಾಡುತ್ತಿರುವವರು ಯಾರು?
- ಬ್ಲೂ ಕಾಲರ್ ವರ್ಕರ್ಸ್ ಯೂನಿಯನ್‌ಗೆ Contract worker ಗಳಿಗೆ ಸಹಾಯ ಮಾಡಬಾರದೆಂದು ಪರೋಕ್ಷವಾಗಿ ತಡೆಯುತ್ತಿರುವವರು ಯಾರು? ಬ್ಲೂ ಕಾಲರ್ ವರ್ಕರ್ಸ್‌ಅನ್ನು Contract workers ಮೇಲೆ ಎತ್ತಿಕಟ್ಟುತ್ತಾ ಕಾರ್ಮಿಕರೇ ಕಾರ್ಮಿಕರನ್ನು ಶೋಷಿಸುವಂತೆ ಮಾಡುತ್ತಿರುವವರು ಯಾರು?
- ವೈಟ್‌ಕಾಲರ್ಸ್ ಕಾರ್ಮಿಕರು ಯೂನಿಯನ್ ಮಾಡಿಕೊಂಡಾಗ ಕುತಂತ್ರದಿಂದ ಯೂನಿಯನ್ ಲೀಡರ್‌ಗಳಿಗೆ ಹಣದ ಆಮಿಷ ಒಡ್ಡಿ ವಿ.ಆರ್.ಎಸ್ ತೆಗೆದುಕೊಳ್ಳುವಂತೆ ಮಾಡಿ ಯೂನಿಯನ್ ಒಡೆದದ್ದು ಯಾರು?
- ಎಲ್ಲ Contract workersಗಳೂ ಈ ತಕ್ಷಣದಿಂದಲೇ ಖಾಯಂ ಆಗುವ ಕಾನೂನುಬದ್ಧ ಅರ್ಹತೆ ಹೊಂದಿದ್ದರೂ ಸಹ ಕೆಲವು ಕಾರ್ಮಿಕರನ್ನು ಮಾತ್ರ ಖಾಯಂ ಗೊಳಿಸಿ, ಅವರ ಸೇವೆಯನ್ನು ನವೀಕರಿಸಿ, ಪ್ರೊಬೇಷನರಿ ಅವಧಿಯಲ್ಲಿ ಇಟ್ಟು, ಅವರಿಗೆ ಸಿಗಬೇಕಾದ ಕಾನೂನು ಸೌಲಭ್ಯಗಳನ್ನು ವಂಚಿಸುತ್ತಿರುವವರು ಯಾರು?

Scanned with OKEN Scanner

ಕಾರ್ಮಿಕರೇ, ಪರಿಸ್ಥಿತಿ ಹೀಗಿರುವಾಗ ಶೋಷಣೆಗೆ ಒಳಗಾಗುತ್ತಿದ್ದ Contract workers ಅನ್ನು ಸಂಘಟಿಸಿ, ನಂತರದಲ್ಲಿ ಆಗಿರುವ

*ಈ ಬದಲಾವಣೆಗಳಿಗೆ ಕಾರಣರು ಯಾರು?*

- ಯಾರ ಕೆಲಸದ ಪರಿಣಾಮವಾಗಿ ಏವರಿ ಡೆನಿಸನ್ ಇತಿಹಾಸದಲ್ಲಿಯೇ ಕಂಡು ಕೇಳಿಲ್ಲದ ಅಪ್ಲಿಕೇಶನ್, ಪ್ರವೇಶ ಪರೀಕ್ಷೆಯಂತಹ ವ್ಯವಸ್ಥೆಯನ್ನು ಅಳವಡಿಸಿಕೊಂಡು ಕಾರ್ಮಿಕರನ್ನು ನೇಮಿಸಿಕೊಳ್ಳುವ ಒತ್ತಡಕ್ಕೆ ಆಡಳಿತವರ್ಗ ಒಳಗಾಗಿದೆ? GATWU
- ಈ ಮೂಲಕ ಕೆಲವರಾದರೂ ಖಾಯಂ ಕಾರ್ಮಿಕರಾಗಲು ಕಾರಣರಾದವರು ಯಾರು? GATWU
- ಈ ಖಾಯಂಗೊಂಡ ಕಾರ್ಮಿಕರ ಸೇವಾವಧಿಯನ್ನು ಕೆಲಸಕ್ಕೆ ಸೇರಿದ ದಿನದಿಂದ ಪರಿಗಣಿಸಬೇಕೆಂದು ಮತ್ತು ಮುಂದೆಯೂ ಅವರ ಉದ್ಯೋಗ ರಕ್ಷಣೆಗಾಗಿ ಹೋರಾಡುವವರು ಯಾರು? GATWU
- Contract workersಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಮೊಟ್ಟ ಮೊದಲ ಬಾರಿಗೆ ದನಿಯೆತ್ತಿ ಅವರನ್ನು ಸಂಘಟಿಸಿ ಅವರ ವೇತನ ಹೆಚ್ಚಾಗುವಂತೆ ಮಾಡಿದ್ದು ಯಾರು? GATWU
- ಉಳಿದ Contract workersಗಳನ್ನು ಖಾಯಂ ಗೊಳಿಸಬೇಕೆಂದು ಹೋರಾಡುತ್ತಿವವರು ಯಾರು? GATWU
- ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಹೋರಾಡುತ್ತಿರುವವರು ಯಾರು? GATWU

ಕಾರ್ಮಿಕರೇ,

ಏವರಿ ಡೆನಿಸನ್ Contract workersಗಳಿಗೆ ಬೆಂಬಲ ನೀಡಬೇಕೆಂದು GATWUರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕಾರ್ಮಿಕರ ಸಂಘಟನೆಗಳೊಂದಿಗೆ ಸಂಪರ್ಕ ಸಾಧಿಸಿದೆ. ಬಂಗ್ಲಾ ದೇಶ, ಶ್ರೀಲಂಕಾ, ಕಂಬೋಡಿಯಾ, ಯುರೋಪ್ ಮತ್ತು ಅಮೆರಿಕಾ ದೇಶಗಳಲ್ಲಿ GATWUಪರವಾಗಿ ಕಾರ್ಮಿಕರು ಬೆಂಬಲ ನೀಡುತ್ತಿದ್ದಾರೆ.

ಏವರಿ ಡೆನಿಸನ್ ಇಂಡಿಯಾ ಪ್ರೈ ಲಿ. ನ ಪ್ರತಿಯೊಬ್ಬ ಕಾರ್ಮಿಕರೂ ತಮ್ಮ ನ್ಯಾಯಯುತ ಹಕ್ಕುಗಳನ್ನು ಪಡೆದುಕೊಳ್ಳುವಂತೆ ಅವರ ಪರವಾಗಿ ಹೋರಾಡಲು GATWUಬದ್ಧವಾಗಿದೆ.

ಬನ್ನಿ...... ನಮ್ಮ ಹೋರಾಟದಲ್ಲಿ ನೀವೂ ಕೈಗೂಡಿಸಿ.... GATWU ಸದಸ್ಯತ್ವವನ್ನು ಪಡೆದುಕೊಳ್ಳಿ, ನಮಗಾಗುತ್ತಿರುವ ಶೋಷಣೆಯ ವಿರುದ್ಧ ಒಂದಾಗಿ ಹೋರಾಡೋಣ, ಒಗ್ಗಟ್ಟಿನಲ್ಲಿ ಬಲವಿದೆ.


ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
**ಗಾರ್ಮೆಂಟ್ ಅಂಡ್ ಟೆಕ್ಸ್ಟೈಲ್ ವರ್ಕರ್ಸ್ ಯೂನಿಯನ್ GATWU**
ನಂ. 17/1, ಮೊದಲನೇ ಮಹಡಿ, ಬಿ.ಎಂ.ಟಿ.ಸಿ. ಬಸ್ ಸ್ಟಾಪ್ ಹತ್ತಿರ, ಹೊಸಗುಡ್ಡದಹಳ್ಳಿ
ಮೈಸೂರು ರಸ್ತೆ, ಬೆಂಗಳೂರು-560 026.
ಮೊ.: **9482444011, 9663933962, 7760138331, 9741208308, 9620745542**


Scanned with OKEN Scanner